ಉಳಿದರು. 'ಸಂಕಷ್ಟದ ಸಂದರ್ಭದಲ್ಲಿ ನಮ್ಮ 'ಪ್ರಾಣಿ' ಕೇಂದ್ರಕ್ಕೆ ಯಾರು ತಾನೆ ಬರುತ್ತಾರೆ? ರಜೆ ಮುಂದುವರಿಯುತ್ತಲೇ ಇದೆ. ಮೂರ್ನಾಲ್ಕು ತಿಂಗಳು ಹೇಗೋ ನಿರ್ವಹಿಸಿದೆವು. ಪ್ರಸ್ತುತ ಪ್ರಾಣಿಗಳ ಸಂರಕ್ಷಣೆಗೆ ಸಹೃದಯರ ನೆರವಿನ ನಿರೀಕ್ಷೆಯಲ್ಲಿದ್ದೇವೆ' ಎನ್ನುವ ಸಂಜೀವ್, ಈವರೆಗೆ ಶಾಲೆಗಳ ಮಕ್ಕಳ ಸಹಕಾರದಿಂದಲೇ ಪ್ರಾಣಿಧಾಮವನ್ನು ನಿರ್ವಹಿಸುತ್ತಾ ಬೆಳೆಸುತ್ತಾ ಬಂದಿದ್ದಾರೆ.

'ಪ್ರಾಣಿ'ಧಾಮಕ್ಕೆ ಬರುವ ಮಕ್ಕಳು ಸ್ವತಃ ಕೆಲವೊಂದು ಪ್ರಾಣಿಗಳ ಮೈದಡವಿ ಮಾತನಾಡಿಸಬಹುದು. ಅವುಗಳಿಗೆ ಮೇವು ಉಣಿಸಬಹುದು. ಮುದ್ದು ಮಾಡಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಅದಕ್ಕೆ ಶುಲ್ಕವನ್ನು ಗೊತ್ತುಪಡಿಸಲಾಗಿದೆ. ಹತ್ತನೇ ತರಗತಿಯ ಮಕ್ಕಳಿಗೆ ಶೈಕ್ಷಣಿಕ ಪಾಠವನ್ನು ಹೇಳಲು ಮೂರು ಕ್ಲಾಸ್ ನಡೆಸಲಾಗುತ್ತದೆ. ಆ ತರಗತಿಗಳಿಗೆ 300 ರೂಪಾಯಿ ಶುಲ್ಕ ಪಡೆಯಲಾಗುತ್ತದೆ. ಯುವಕರು ಮತ್ತು ಪಾಲಕರು ಮಕ್ಕಳ ಜೊತೆ ಬಂದರೆ ಮಾತ್ರ ಪ್ರವೇಶಕ್ಕೆ ಅವಕಾಶವಿದೆ. ಉಳಿದಂತೆ ಅಂಗವಿಕಲ ಮತ್ತು ವಿಶೇಷ ಮಕ್ಕಳಿಗೆ, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಪ್ರವೇಶವಿದೆ. ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು, ತಮಿಳಿನಲ್ಲಿ ನಾವು ಶಿಕ್ಷಣ ನೀಡುತ್ತಿದ್ದೇವೆ ಎಂದು ಸಂಜೀವ್ ಮಾಹಿತಿ ನೀಡುತ್ತಾರೆ.

'ಸುಮ್ಮನೆ ಪಿಕ್‌ನಿಕ್ ರೀತಿ ಸುತ್ತಾಡಲು ಯಾರೂ ಇಲ್ಲಿಗೆ ಬರುವುದಿಲ್ಲ. ಬಂದವರು ತಮ್ಮ ಅರಿವನ್ನು ವಿಸ್ತರಿಸಿಕೊಂಡು ಹೋಗುತ್ತಾರೆ' ಎನ್ನುತ್ತಾರೆ ಸಂಜೀವ್.

'ಮುಕುಂದ ಎಂಬ ಒಬ್ಬ ಹುಡುಗ ಇದ್ದಾನೆ. ಅವನಿಗೆ ಹಾವಿನ ಬಗ್ಗೆ ಸಂಶೋಧನೆ ಮಾಡುವ ಆಸೆ. ಅವನಿನ್ನೂ ಚಿಕ್ಕವನು. ಅವನಿಗೆ ಉಚಿತ ತರಬೇತಿಯನ್ನು ನೀಡುತ್ತಿದ್ದೇವೆ. ಹಾವು ಹಿಡಿಯುವುದು ಮತ್ತು ಪಾಲನೆ ಮಾಡುವುದನ್ನು ಕಲಿತಿದ್ದಾನೆ. ಪ್ರಾಣಿಗಳಿಗೆ ಬೂಸಾ, ಅಕ್ಕಿ, ನೆಲ್ಲುಹುಲ್ಲುನೀಡಲಾಗುತ್ತದೆ. ಹಸಿರು ಹುಲ್ಲಿಗೆ ಪ್ರತಿ ತಿಂಗಳು 4 ಲಕ್ಷ ಖರ್ಚಾಗುತ್ತದೆ. ಪ್ರಾಣಿ ಪಾಲಕರು ಮತ್ತು ಸ್ವಚ್ಛಗೊಳಿಸುವ ಸಿಬ್ಬಂದಿ 15 ಮಂದಿ ಇದ್ದಾರೆ. ಅವರಿಗೆ ಊಟ, ಸಂಬಳ, ಸಾರಿಗೆ ಎಂದು 2 ಲಕ್ಷ ರೂಪಾಯಿ ಬೇಕಾಗುತ್ತದೆ. ಉಳಿದಂತೆ ಸ್ವಯಂ ಸೇವಕರು, ಮಾಹಿತಿದಾರರು ಹತ್ತು ಮಂದಿ ಇದ್ದೇವೆ. ಅವರಿಗೆ ಲಾಕ್‌ಡೌನ್ ನಂತರ ಸಂಬಳವನ್ನೇ ನೀಡಿಲ್ಲ' ಎಂದು ಸಂಜೀವ್ ತಮ್ಮ ಸಂಕಷ್ಟವನ್ನು ತೋಡಿಕೊಂಡರು.

''ನಮ್ಮ ಮನೆಗೆ ಹಾವು ಬಂದಿದೆ ಬೇಗ ಬನ್ನಿ'' ಎಂಬ ಆತಂಕದ ಹತ್ತಾರು ಕರೆಗಳು ಪ್ರತಿ ನಿತ್ಯ ಬರುತ್ತವೆ. ನಾವು ಎರಡು, ಮೂರು ಹಾವು ಹಿಡಿಯುತ್ತೇವೆ. ಉಳಿದ ಏಳೆಂಟು ಪ್ರಕರಣಗಳಲ್ಲಿ ಹಾವು ಹಿಡಿಯುವ ಅಗತ್ಯವೇ ಇರುವುದಿಲ್ಲ. ಏಕೆಂದರೆ ಮನೆಯ ಹೊರ ಆವರಣದಲ್ಲಿ, ಇಲ್ಲವೇ ಮನೆ ಹತ್ತಿರದ ಮರದ ಮೇಲೆ, ಚರಂಡಿಯಲ್ಲಿ ಹಾವಿರುತ್ತದೆ. ಅಂತಹ ಸಂದರ್ಭದಲ್ಲಿ ಫೋನ್ ಮೂಲಕವೇ ಅವರಿಗೆ ಅಗತ್ಯವಾದ ಮಾಹಿತಿಯನ್ನು







ನೀಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಬೇರೆ ಬೇರೆ ಪ್ರಾಣಿಗಳು ಮನೆಯ ಹತ್ತಿರ ಬಂದರೂ ಭೀತಿಯಿಂದ ಫೋನ್ ಮಾಡಿ ತಮ್ಮ ಅಳಲನ್ನು ತೋಡಿಕೊಳ್ಳುವ ಜನ ಇದ್ದಾರೆ' ಎಂದು ಸಂಜೀವ್ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ.

## ಪ್ರಾಣಿ ಕರುಣೆ ಹುಟ್ಟಿದ್ದು...

ಸಿನಿಮಾ–ಟೀವಿ ಕಲಾವಿದೆ ಪದ್ಮಜಾ ರಾವ್ ಮತ್ತು ಕೇಬಲ್ ನೆಟ್‌ವರ್ಕ್ ಕಂಪನಿಯ ಉದ್ಯೋಗಿ ಪ್ರಕಾಶ್ ದಂಪತಿಯ ಮಗ ಸಂಜೀವ್. ಅವರು ಕಾನ್ವೆಂಟ್‌ನಲ್ಲಿ ಓದುವಾಗಲೇ ಪ್ರಾಣಿ ಪ್ರೇಮ ಬೆಳೆದಿದೆ. ಅವರ ಕುಟುಂಬದಲ್ಲಿ ಒಂದು ನಾಯಿಯನ್ನೂ ಸಾಕಿರಲಿಲ್ಲ. ಹೀಗಿರುವಾಗ ಇಷ್ಟೆಲ್ಲ ಪ್ರಾಣಿಗಳನ್ನು ಸಾಕಿರುವುದು ಸ್ವತಃ ಅವರಿಗೇ ಬೆರಗು ಹುಟ್ಟಿಸಿದೆ.

ಸಂಜೀವ್ ಪ್ರಾಥಮಿಕ ಶಾಲೆಯಲ್ಲಿ ಇದ್ದಾಗ ಅವರ ಶಾಲೆಯಲ್ಲಿ ವಿಶೇಷ ಪಠ್ಯವನ್ನು ಪರಿಚಯಿಸಿದ್ದರು. 'ನ್ಯೂಸ್‌ಪೇಪರ್ ಇನ್ ಎಜುಕೇಶನ್' ಪಠ್ಯದ ಅನುಸಾರ ಯಾವುದಾದರೂ ವಿಶೇಷ ತರಗತಿಯನ್ನು ಪರಿಣಿತರು ಬಂದು ಮಾಡುತ್ತಿದ್ದರು. ಆಟೋಮೊಬೈಲ್, ಲೈಂಗಿಕ ಶಿಕ್ಷಣ, ಪರಿಸರ, ವನ್ಯಜೀವಿಗಳ ಬಗ್ಗೆ – ಹೀಗೆ ಅನೇಕ ವಿಷಯವನ್ನು ತಿಳಿಸುತ್ತಿದ್ದರು.

ಆರನೇ ತರಗತಿಯಲ್ಲಿದ್ದಾಗ ಒಮ್ಮೆ ಪ್ರಾಣಿಗಳ ಬಗ್ಗೆ ಪಾಠ ಮಾಡಲು ಎಂ.ಕೆ. ಶ್ರೀನಾಥ್ ಎನ್ನುವವರು ಬಂದಿದ್ದರಂತೆ. ಸಭಾಂಗಣದಲ್ಲಿ ಸುಮಾರು 150 ಮಕ್ಕಳಿದ್ದರು. ವಿಷಯ ಮಂಡನೆಯ ನೆರವಿಗೆ ಓರ್ವ ಸ್ವಯಂಸೇವಕ ಬೇಕು ಎಂದು ಶ್ರೀನಾಥ್ ಅವರು ಕೇಳಿದಾಗ, ಸಂಜೀವ್ ಕೈ ಎತ್ತಿದ್ದಾರೆ. ತಕ್ಷಣ 'ಬಾ ಮರಿ' ಎಂದು ಶ್ರೀನಾಥ್ ತಮ್ಮ ಕಾರಿನ ಬಳಿ ಕರೆದುಕೊಂಡು ಹೋಗಿದ್ದಾರೆ. ಅಂದೇ ಹೆಬ್ಬಾಳದ ಕೆರೆಯಲ್ಲಿ ಮೀನುಗಾರರ ಬಲೆಯಲ್ಲಿ ಸಿಲುಕಿದ್ದ ಮೊಸಳೆಯನ್ನು ತಂದಿದ್ದರು. ಅದಕ್ಕೆ ಸ್ವಲ್ಪ ಗಾಯವಾಗಿತ್ತು. ಬಾಯಿಯನ್ನು ಬಟ್ಟೆಯಿಂದ ಬಿಗಿದು ಕಟ್ಟಿದ್ದರು. ಬಾಲಕನಿಗೆ ಮೊಸಳೆಯನ್ನು ಹಿಡಿದುಕೊಳ್ಳಲು ಹೇಳಿದ್ದಾರೆ. 'ಆಗುವುದಿಲ್ಲ, ಸಾಧ್ಯವೇ ಇಲ್ಲ' ಎಂದು ನಿರಾಕರಿಸಿದ ಬಾಲಕ ಸಂಜೀವ್, ಮೊಸಳೆಯ ಬದಲಿಗೆ ಶ್ರೀನಾಥ್‌ರ ಕೈಗಳಲ್ಲಿದ್ದ ಬ್ಯಾಸ್ಕೆಟ್‌ಗಳನ್ನು ಹಿಡಿದುಕೊಂಡಿದ್ದಾರೆ.

ಶ್ರೀನಾಥ್ ತಮ್ಮ ಹೆಗಲ ಮೇಲೆ ಮೊಸಳೆಯನ್ನು ಇಟ್ಟುಕೊಂಡು ಮುನ್ನಡೆದರೆ, ಅವರ ಹಿಂದೆ ಎರಡು ಬ್ಯಾಸ್ಕೆಟ್‌ಗಳನ್ನು ಹಿಡಿದ ಬಾಲಕ ಸಂಜೀವ್. ಸಭಾಂಗಣದಲ್ಲಿ ಮೊಸಳೆಯನ್ನು ನೋಡಿ ನೀರವ ಮೌನ. ತಾವು ತಂದಿದ್ದ ಮೊಸಳೆಯನ್ನು ಅಕ್ವೇರಿಯಂನಲ್ಲಿ ಸಾಕಿದ್ದು, ಅದು ದೊಡ್ಡದಾದ ಮೇಲೆ ನಿಭಾಯಿಸಲು ಆಗದೆ ಕೆರೆಯಲ್ಲಿ ಬಿಟ್ಟು ಹೋಗಿದ್ದಾರೆ ಎನ್ನುವ ಮಾಹಿತಿಯನ್ನು ಶ್ರೀನಾಥ್ ನೀಡಿದಾಗ ಮಕ್ಕಳಿಗೆಲ್ಲ ಆಶ್ಚರ್ಯ. ನಂತರ ಸಂಜೀವ್ ಬಳಿಯಿದ್ದ ಬುಟ್ಟಿ ಪಡೆದ ಅವರು, ಮುಚ್ಚಳ ತೆಗೆದಾಗ ಅದರಲ್ಲಿ ನಾಗರಹಾವು! ಆ ಕ್ಷಣ ಸಂಜೀವ್ ಮೈ ನಡುಗಿದೆ. ಮರುಕ್ಷಣ ಯಾವುದೋ ಸಾಹಸ ಮಾಡಿದ ರೋಮಾಂಚನ. ಪ್ರಾಣಿಗಳ ಬಗ್ಗೆ ಮೊದಲ ಸೆಳೆತ ಶುರುವಾದುದು ಹಾಗೆ.

ಸಂಜೀವ್ ಪ್ರೌಢಶಾಲೆಗೆ ಬರುವ ವೇಳೆಗೆ ಅವರ ಕುಟುಂಬದ ವಾಸಸ್ಥಾನ ಪದ್ಮನಾಭ ನಗರಕ್ಕೆ ಹತ್ತಿರದ ಕದಿರೇನಹಳ್ಳಿಗೆ ಬದಲಾಗಿದೆ. ಅವರ ಹೊಸ ಮನೆ ಶ್ರೀನಾಥ್ ಅವರ ಮನೆಗೆ ಹತ್ತಿರವಿದೆ. ಮಿನಿ ಮೃಗಾಲಯದಂತೆ ಕಾಣಿಸುತ್ತಿದ್ದ ಶ್ರೀನಾಥ್‌ರ ಮನೆಗೆ ಆಗಾಗ ಹೋಗುವ ಮೂಲಕ ಪ್ರಾಣಿಗಳ ಬಗ್ಗೆ ಕುತೂಹಲ ಬೆಳೆದಿದೆ. ಹುಡುಗನ ಆಸಕ್ತಿ ಗುರುತಿಸಿದ ಶ್ರೀನಾಥ್, ಹಾವಿನ ಜೊತೆ ಬದುಕುವುದನ್ನು ಸಂಜೀವ್‌ರಿಗೆ ಕಲಿಸಿದ್ದಾರೆ. ಆ ಆಸಕ್ತಿಯೇ ಈಗ 'ಪ್ರಾಣಿ'ಧಾಮವಾಗಿ ಬೆಳೆದು ನಿಂತಿದೆ.

## ಇರುವುದು ಎಲ್ಲಿ?

ಬೆಂಗಳೂರಿನಿಂದ ಕನಕಪುರ ಮಾರ್ಗದಲ್ಲಿ ಸೋಮನಹಳ್ಳಿ ಗೇಟ್‌ಗೆ ಸ್ವಲ್ಪ ದೂರದಲ್ಲಿ 'ಪ್ರಾಣಿ'ಧಾಮವಿದೆ.

**ಸಂಜೀವ್ ಅವರ ಸಂಪರ್ಕ: 97420 84335**

**ಪ್ರತಿಕ್ರಿಯಿಸಿ: feedback@sudha.co.in**